ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 60(1)ರನ್ವಯ ಅನುಮತಿಯನ್ನು ಪಡೆದುಕೊಂಡಿರುವುದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ತೋಟಗಾರಿಕಾ ಫಾರಂಗಳ ಆದಾಯ ಮತ್ತು ನಷ್ಟ

781(1293) ಶ್ರೀ ಯು.ಆರ್. ಸಭಾಪತಿ(ಉಡುಪಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ತೋಟಗಾರಿಕಾ ಫಾರಂಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು).

ಆ) ಇವುಗಳಿಂದ ಬರುವ ಆದಾಯವೆಷ್ಟು; ಜಿಲ್ಲಾವಾರು ವಿವರ ನೀಡುವುದು?

ಇ) ಇವುಗಳಲ್ಲಿ ನಷ್ಟದಲ್ಲಿರುವ ಫಾರಂಗಳೆಷ್ಟು; ಹಾಗೂ ನಷ್ಟಕ್ಕೆ ಕಾರಣಗಳೇನು ವಿವರ ನೀಡುವುದು?

ಈ) ಈ ಫಾರಂಗಳ ಅಭಿವೃದ್ಧಿಗೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ಒಟ್ಟು 415 ತೋಟಗಾರಿಕೆ ಕ್ಷೇತ್ರ:ನರ್ಸರಿಗಳಿವೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಕಾಣಿಸಲಾಗಿದೆ.

ಆ) 2000-2001ನೇ ಸಾಲಿನಲ್ಲಿ ರೂ. 4.61 ಕೋಟಿಗಳು, ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.

ಇ) ತೋಟಗಾರಿಕೆ ಕ್ಷೇತ್ರಗಳನ್ನು ಉತ್ತಮ ಗುಣಮಟ್ಟದ ಗಿಡಗಳ ಉತ್ಪಾದನೆ ಮತ್ತು ವಿತರಣೆಗೆ, ರೈತರಿಗೆ ಪ್ರಾತ್ಯಕ್ಷತೆಗಳಾಗಿ ಅಭಿವೃದ್ಧಿ ಮಾಡಲು ಹಾಗೂ ಸ್ಥಳೀಯ ಭೂ ಹವಾಗುಣಗಳಿಗೆ ಬೆಳೆಗಳು ಹೊಂದಿಕೊಳ್ಳುವ ಬಗ್ಗೆ ಅಧ್ಯಯನ ನಡೆಸಲು ಸ್ಥಾಪಿಸಲಾಗಿದೆ. ಆದುದರಿಂದ ಎಲ್ಲವೂ ಲಾಭ ಮಾಡುತ್ತಿರುವುದಿಲ್ಲ.

ಈ) ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ತೋಟಗಾರಿಕೆ ಕ್ಷೇತ್ರಗಳಲ್ಲಿ ವ್ಯಾಪಕ ಸಸ್ಯೋತ್ಪಾದನಾ ಕಾರ್ಯಕ್ರಮಗಳನ್ನು ಕೈಗೊಂಡು ರೈತರಿಗೆ ಬೇಕಾದ ಕಸಿ:ಸಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಗೂ ಸುಲಭ ದರದಲ್ಲಿ ಒದಗಿಸುವುದು.

2. ತೋಟಗಾರಿಕೆ ಕ್ಷೇತ್ರಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ವ್ಯಾಪಕ ಪ್ರಮಾಣದಲ್ಲಿ ರಾಜ್ಯದ್ಯಾಂತ ಕೈಗೊಳ್ಳಲಾಗಿದೆ.

3. ನೀರಿನ ಕೊರತೆ ನೀಗಿಸಲು ಹೆಚ್ಚಿನ ಸಂಖ್ಯೆಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಲಾಗುತ್ತಿದೆ.

4. ಇತ್ತೀಚಿಗೆ ಬಿಡುಗಡೆಯಾದ ನವೀನ ಹಾಗೂ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಪರಿಚಯಿಸಿ, ಅವುಗಳ ಸಸ್ಯಾಭಿವೃದ್ಧಿಗೆ ಕ್ರಮ ಏರ್ಪಡಿಸಲಾಗಿದೆ.

5. ಕ್ಷೇತ್ರದ ಹೆಚ್ಚುವರಿ ಕೆಲಸ ಕಾರ್ಯಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ -1

ಕ್ರ. ಸಂ.	ಜಿಲ್ಲೆಯ ಹೆಸರು	ರಾಜ್ಯವಲಯ		ಜಿಲ್ಲಾವಲಯ		ಒಟ್ಟು	
		ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
1	2	3	4	5	6	7	8
1.	ಬೆಂಗಳೂರು (ನಗರ)	4	532.32	3	15.00	7	597.32
2.	ಬೆಂಗಳೂರು (ಗ್ರಾ)	10	339.00	6	106.01	16	445.01
3.	ಕೋಲಾರ	17	1385.32	15	125.17	32	1511.09
4.	ತುಮಕೂರು	18	3660.37	4	110.21	20	3771.18
5.	ಶಿವಮೊಗ್ಗ	11	433.09	6	136.13	17	569.22
6.	ಚಿತ್ರದುರ್ಗ	9	292.33	12	255.09	21	547.45
7.	ದಾವಣಗೆರೆ*	-	- -	-	-	-	-
8.	ಮೈಸೂರು	19	327.30	13	191.34	39	1519.24
9.	ಚಾಮರಾಜನಗರ*	-	-	-	-	-	-
10.	ಮಂಡ್ಯ	19	1724.30	10	263.06	29	1987.38
11.	ಕೊಡಗು	5	547.20	5	57.39	10	605.19
12.	ಹಾಸನ	11	791.21	4	158.32	15	920.13
13.	ಚಿಕ್ಕಮಗಳೂರು	7	95.29	7	188.12	14	284.01
14.	ದಕ್ಷಿಣ ಕನ್ನಡ	15	779.00	8	103.37	23	882.37
15.	ಉಡುಪಿ*	-	-	-	-	-	-
16.	ಬೆಳಗಾವಿ	19	295.10	10	182.38	29	478.14
17.	ವಿಜಾಪುರ	10	220.28	7	108.24	17	329.12
18.	ಧಾರವಾಡ	15	110.00	17	178.28	32	288.26
19.	ಉತ್ತರ ಕನ್ನಡ	13	313.08	7	78.34	20	392.02
20.	ಗದಗ*	-	-	-	-	-	-
21.	ಹಾವೇರಿ*	-	-	-	-	-	-
22.	ಬಾಗಲಕೋಟೆ*	-	-	-	-	-	-
23.	ಗುಲ್ಬರ್ಗಾ	9	278.28	9	56.31	18	333.19
24.	ಬೀದರ್	7	425.29	8	81.02	13	508.22
25.	ರಾಯಚೂರು	15	287.33	10	155.00	25	422.33
26.	ಬಳ್ಳಾರಿ	13	501.08	9	279.06	22	760.14
27.	ಕೊಪ್ಪಳ*	-	-	-	-	-	-
	ಒಟ್ಟು	244	14321.18	171	2828.22	415	7150.00

* ಹೊಸ ಜಿಲ್ಲೆಗಳಲ್ಲಿನ ಕ್ಷೇತ್ರ:ಸಸ್ಯಾಗಾರಗಳ ವಿಸ್ತೀರ್ಣವು ಹಳೆಯ ಜಿಲ್ಲೆಗಳ (ಜಿಲ್ಲೆ) ವ್ಯಾಪ್ತಿಯಲ್ಲಿ ಸೇರ್ಪಡೆಯಾಗಿರುತ್ತದೆ.

ಅನುಬಂಧ-2

2000-2001ನೇ ಸಾಲಿನಲ್ಲಿ ಜಿಲ್ಲಾವಾರು ಇಲಾಖಾ ಕ್ಷೇತ್ರಗಳಿಂದ ಬಂದ ಆದಾಯದ ವಿವರಗಳು

ಕ್ರ.ಸಂ.	ಜಿಲ್ಲೆಯ ಹೆಸರು	ಆದಾಯ (ರೂ. ಗಳಲ್ಲಿ)	
		ರಾಜ್ಯ ವಲಯ	ಜಿಲ್ಲಾವಲಯ
1	2	3	4
1.	ಬೆಂಗಳೂರು ನಗರ	-	2,39,849
2.	ಬೆಂಗಳೂರು ಗ್ರಾಮಾಂತರ	39,43,439	17,19,596
3.	ಕೋಲಾರ	37,21,708	9,40,822
4.	ತುಮಕೂರು	28,95,768	7,16,942
5.	ಚಿತ್ರದುರ್ಗ	10.11,679	7,60,278
6.	ಶಿವಮೊಗ್ಗ	39,32,849	7,08,231
7.	ದಾವಣಗೆರೆ	-	11,62,508
8.	ಮೈಸೂರು	21,08,795	4,79,606
9.	ಚಾಮರಾಜನಗರ	-	3,04,749
10.	ಮಡಿಕೇರಿ	7,20,876	8,50,756
11.	ಮಂಡ್ಯ	17,54,734	14,40,619
12.	ಚಿಕ್ಕಮಗಳೂರು	3,39,596	3,49,547
13.	ಹಾಸನ	10.31,285	10,85,887
14.	ದಕ್ಷಿಣ ಕನ್ನಡ	16,74,167	4,97,590
15.	ಉಡುಪಿ	-	6,47,183
16.	ಬೆಳಗಾವಿ	17,36,543	4,69,489
17.	ವಿಜಾಪುರ	8,72,153	9,99,990
18.	ಬಾಗಲಕೋಟೆ	-	3,61,830
19.	ಧಾರವಾಡ	7,11,047	2,75,145
20.	ಹಾವೇರಿ	-	6,32,276
21.	ಗದಗ	-	4,08,363
22.	ಉತ್ತರ ಕನ್ನಡ	10,30,560	1,33,960
23.	ಗುಲ್ಬರ್ಗ	10,26,236	1,38,070
24.	ಬೀದರ್	5,00,774	1,72,192
25.	ಬಳ್ಳಾರಿ	7,09,356	5,69,209
26.	ರಾಯಚೂರು	11,94,511	3,06,979
27.	ಕೊಪ್ಪಳ + ಪಂಪಾವನ	1,33,150	4,62,677
	ಒಟ್ಟು	2,92,94,492	1,68,34,343
		ಒಟ್ಟಾರೆ ರೂ. 4,61,28,835	